ಕರೆದುಕೊಂಡು ಹೋಗಬೇಕು ಪ್ಲೀಸ್' ಅಂತ ವಿನಂತಿಸಿಕೊಂಡ. ಆ ಬದಿಯಿಂದ ಮಣಿ ಏನು ಹೇಳಿದ್ನೋ ಅದನ್ನು ಕೇಳಿಸಿಕೊಳ್ಳದೆ ಕರೆಯನ್ನು ಕಟ್ ಮಾಡಿ ಸುಮ್ಮನೆ ಎಲ್ಲಿಗೋ ಹೊರಟುಹೋದ ಮಾಧವ.

ಬಂದ ಮಣಿಶಂಕರ್. ಅವಳನ್ನು ಎಬ್ಬಿಸಿ ಕಾರಿನತ್ತ ನಡೆಸಿಕೊಂಡು ಹೋಗ್ತಿರುವ ಅವನ ಮೊಗದಲ್ಲಿ ಬಣ್ಣಿಸಲಾಗದ ತೃಪ್ತಿಯನ್ನು ಎವೆಗಳು ಮುಚ್ಚಿಕೊಳ್ತಿರುವಾಗಲೂ ಗಮನಿಸದೆ ಇರಲಿಲ್ಲ ಪ್ರಶಾಂತಿ. ದೂರದ ಸಂಬಂಧದಲ್ಲಿ ತಮ್ಮನಾಗುವ ವೈದ್ಯನ ಬಳಿಗೆ ಕರೆದುಕೊಂಡು ಹೋದ ಮಣಿ. ಮಾಧವ ಸರಕಾರಿ ಉದ್ಯೋಗಿ ಆದುದರಿಂದ, ಅವನು ಓಡಿ ಹೋದ, ಇನ್ನೂ ಡೈವೋರ್ಸ್ ಆಗಲಿಲ್ಲವಾದುದರಿಂದ ಕೇಸು ತನ್ನ ಮೇಲೆ ಬರುವ ಅವಕಾಶವಿರೋದ್ರಿಂದ ತಾನೇ ಕರೆದುಕೊಂಡು ಬಂದೆ ಅಂದ ಮಣಿ. ರಹಸ್ಯವಾಗಿ ಪ್ರಶಾಂತಿಗೆ ಚಿಕಿತ್ಸೆ ಕೊಡಿಸಿ, ನಾಲಕ್ಕನೆಯ ದಿನ ಅವಳನ್ನು ಅವಳ ಮನೆಯಲ್ಲಿ ಡ್ರಾಪ್ ಮಾಡಿ ಹೋದ ಪುಣ್ಯಾತ್ಮ.

ಕಾಡುಮಲ್ಲಿಗೆಯ ಮರವೊಂದೇ ಅವಳಿಗೆ ಇನ್ನೂ ನಾಲಕ್ಕು ದಿನ ಸಂಗಾತಿಯಾಗಿತ್ತು. ನಂತರ ಆ ಮನೆಯೊಳಗೆ ಹೆದಹೆದರುತ್ತಲೇ ಹೆಜ್ಜೆ ಇಟ್ಟದ್ದು ಮಾಧವ. ಮಾತಿಲ್ಲ. ಯುಗಾಂತರಗಳಿಂದ ನಿರೀಕ್ಷಿಸುತ್ತಿರುವ ಅದ್ಭುತವೊಂದು ಹಠಾತ್ತಾಗಿ ಪ್ರತ್ಯಕ್ಷವಾದಂತೆ ಹಾಲಲ್ಲಿ ಅವನು ಕಾಣಿಸಿಕೊಂಡಾಗ ಬಾಹುಗಳ ಚಾಚಿದಳು ಪ್ರಶಾಂತಿ. ಪುಟ್ಟ ಮಗುವಿನಂತೆ ಓಡಿಬಂದು ಅಪ್ಪುಗೆಯಲ್ಲಿ ಬೆರೆತುಹೋದ. ಬ್ಯಾಂಡೇಜು ಬಿಗಿದಿದ್ದ ಅವಳ ಕೈಯನ್ನು ಜೋಪಾನವಾಗಿ ಹಿಡಿದು 'ನಾನು ಇನ್ನ್ಯಾರಿಗೂ ಹೆದರಲ್ಲ. ಈ ಕೈ ಬಿಡಲ್ಲ' ಅಂದ. ಆ ಮಾತು ಎಷ್ಟು ಸತ್ಯವಾಯಿತೆಂದರೆ, ಅವರಿಬ್ಬರೂ ಎಲ್ಲಿಗೇ ಹೋಗಲಿ ಅವಳ ಕೈಯನ್ನು ಬಿಡುತ್ತಿರಲಿಲ್ಲ ಮಾಧವ. ಅವರ ಸಂಬಂಧದ ಬಗ್ಗೆ ಯಾರಾದರೂ ವ್ಯಂಗ್ಯವಾಗಿ ಮಾತಾಡಿದರೆ ಅವಳ ಮೊಗದಲ್ಲಿ ಸ್ಥಿಮಿತತೆಯ ನಗೆ ನೆರಳಾಡುತ್ತಿತ್ತು: ಅದಕ್ಕೆ ಕಾರಣವೂ ಇಲ್ಲದಿಲ್ಲ. ಆಗೆಲ್ಲ ಮಾಧವ ಅವಳ ಮಣಿಕಟ್ಟಿನ ಮೇಲಿನ ಗಾಯದ ಗೆರೆಯನ್ನು ರಹಸ್ಯವಾಗಿ ನೇವರಿಸುತ್ತಾ ಸಾಂತ್ವನ ಮಾಡುತ್ತಿದ್ದ.

* * *

ಮನೆಯ ಖರ್ಚುವೆಚ್ಚಗಳನ್ನೆಲ್ಲ ಪ್ರಶಾಂತಿಯೇ ನಿಭಾಯಿಸುತ್ತಿದ್ದಳು. ತನ್ನ ಸಂಪೂರ್ಣ ಸಂಬಳವನ್ನು ಹೆಂಡತಿಯ ಅಕೌಂಟಿಗೆ ಜಮೆ ಮಾಡಿ ಬಿಡುತ್ತಿದ್ದ ಮಾಧವ. ಜೊತೆಗೆ ಹೆಂಡತಿ- ಮಕ್ಕಳಿಗೆ ಮಾಡಿದ ಅನ್ಯಾಯ ನೆನಪಿಗೆ ತಾಗಿದಾಗೆಲ್ಲ, ಮಕ್ಕಳಿಗೆ, ಹೆಂಡತಿಗೆ ಬೋನಸ್ ಹಣದಲ್ಲೋ, ಪ್ರಶಾಂತಿಯಿಂದಲೋ ತಗೊಂಡು ಗಿಫ್ಟ್ಸ್ ರೂಪದಲ್ಲಿ ಕೊಡ್ತಿದ್ದ. 'ಯಾಕೆ ಇವೆಲ್ಲ? ಮನುಷ್ಯನಿಗೆ ಸರಿಸಮವಾಗಿ ಬರುತ್ತಾ ಇವು?' ಅಳುತ್ತಿದ್ದಳು ಹೆಂಡತಿ.

ಹಾಗೆ ನೋಡಿದರೆ ಪ್ರಶಾಂತಿಗೆ ಆ ಅವಕಾಶವೇ ಇಲ್ಲ. ಮಗನನ್ನು ಭೇಟಿಯಾಗಲಿಕ್ಕೆ ಸಮ್ಮತಿಸಲೇ ಇಲ್ಲ ಮಣಿ.

'ದಬಾಯಿಸಿ ಕೇಳುವ ಹಕ್ಕು ನನಗಿಲ್ಲ' ಅಂತ ಸುಮ್ಮನಾಗಿಬಿಡುತ್ತಿದ್ದಳು. ಆವೇಳೆಗಾಗಲೇ ಮಗನನ್ನು ನೋಡಿ ಏಳೆಂಟು ವರುಷ ಆಗಿತ್ತು. ಅವಳ ಹೆತ್ತವರು ಆಶ್ರಮದ ಬದುಕಿನಲ್ಲಿ ಮುಳುಗಿ ಹೋಗಿದ್ದಾರೆ. ಮಾಧವನನ್ನು ಬಿಟ್ಟು ಅವಳಿಗೆ ಎಮೋಷನಲ್ ಆದ ಬಂಧವು ಮತ್ತಾರ ಜೊತೆಯಲ್ಲೂ ಉಳಿದಿಲ್ಲ. ಆದ್ದರಿಂದಲೂ ಅವನೇ ಅವಳ ಸಂಪೂರ್ಣ ಲೋಕ.

ಆದರೆ, ಒಂದು ಸಂಕಟವಂತೂ ಇದ್ದೇ ಇರುತ್ತಿತ್ತು- ಆಗಾಗ ಮಾಧವ ತನ್ನ ಹೆಂಡತಿ- ಮಕ್ಕಳನ್ನು ನೋಡಿ ಬರಲು ಹೋದಾಗ. ಕ್ರಮೇಣ ಅದು ಹೊಟ್ಟೆಕಿಚ್ಚಿನಂತೆ ಬದಲಾಗೋದು ನೋಡಿ, ನಂತರ ಪಶ್ಚಾತ್ತಾಪದಿಂದ, ಸ್ವಲ್ಪ ಹಣವನ್ನು ಮಾಧವನಿಗೆ ಕೊಟ್ಟು ಆ ಮಕ್ಕಳಿಗೆ ಏನಾದರೂ ತಗೊಂಡು ಹೋಗಿ ಕೊಡು ಅಂತಲೂ ಹೇಳುತ್ತಿದ್ದಳು. ಒಂದೆರಡು ಮೂರು ದಿನ ಮಾಧವ ತನ್ನ ಮಕ್ಕಳನ್ನು ಎಲ್ಲಾದರೂ ಪ್ರವಾಸಕ್ಕೆ ಕರೆದುಕೊಂಡು ಹೋಗಿ ಬಂದಾಗ, ಎಷ್ಟೇ ತಡಕೊಂಡರೂ ಎದೆ ಒಡೆದುಹೋಗುವಂತೆ ಫೀಲ್ ಆಗುತ್ತಿತ್ತು. ತಾನು ಕೆಲಸ ಮಾಡುವ ಆಫೀಸಿಗೆ ಬರುವ ಹೊಸ ಜನರೊಂದಿಗೆ ಸ್ನೇಹದಿಂದ ಇರಲಿಕ್ಕೆ ತುಂಬಾನೆ ಪ್ರಯತ್ನಿಸಿ, ಆ ಕಾಲವನ್ನು ಹೇಗೋ ದಾಟಿ ಬಿಡುತ್ತಿದ್ದಳು.

ಒಮ್ಮೆ ಮಾಧವನ ಹೆಂಡತಿ, ಮಕ್ಕಳು ಬಾಡಿಗೆಗಿದ್ದ ಮನೆಯನ್ನು ತುರ್ತಾಗಿ ಖಾಲಿ ಮಾಡಬೇಕಾಗಿ ಬಂತು. ಆಗಂತೂ ಅವನು ತುಂಬಾನೆ ನೊಂದುಕೊಂಡ. ಇನ್ನು ಮುಂದೆ ಅವರು ಬಾಡಿಗೆ ಮನೆ ಆಗಾಗ